**ಅಸಲು ದಾವಾ ನಂಃ294/2022**
**ಡಿ.ಡಬ್ಲ್ಯೂ: 03**

**<u>ದಿನಾಂಕಃ16-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಡಿ ಜೆ ಆರ್., ವಾದಿ ಪರ ವಕೀಲರಿಂದ</u>**

ಎದುರು ದಾವೆ ಎಂದರೆ ನನಗೆ ತಿಳಿಯುವುದಿಲ್ಲ. ಈ ಎದುರು ದಾವೆಯನ್ನು ದಾರಿಯ ವಿಚಾರಕ್ಕಾಗಿ ಹೂಡಿರುತ್ತಾರೆ. ಈ ಎದುರು ದಾವೆಯನ್ನು ಸರ್ವೇ ನಂ.67/1 ಕ್ಕೆ ಸಂಬಂಧಿಸಿದಂತೆ ಹೂಡಲಾಗಿದೆ. ಎದುರು ದಾವಾ ಸ್ವತ್ತಿನ ಚೆಕ್ ಬಂದಿ ಪೂರ್ವಕ್ಕೆ ಬೋರಯ್ಯನ ಜಮೀನು, ಪಶ್ಚಿಮಕ್ಕೆ ಪಟೇಲ ಪಾಲಾನಾಯ್ಕರವರ ಜಮೀನು, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಮುಷ್ಟಲಗುಮ್ಮಿ ಸಾಹುಕಾರರ ಮತ್ತು ಮುಷ್ಟಲಗುಮ್ಮಿ ಕುಂಬಾರವರ ಜಮೀನು ಬರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಎಲ್ಲಾ ಅಂಶಗಳು ನನಗೆ ತಿಳಿದಿವೆ. ಸದರಿ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಎದುರುದ ದಾವಾ ಸ್ವತ್ತಿನಲ್ಲಿ ಬಂಡಿ ದಾರಿ ಇರುವ ಬಗ್ಗೆ ನಾನು ಖುದ್ದು ನೋಡಿರುತ್ತೇನೆ. ದಾರಿ ಇರುವ ಬಗ್ಗೆ ತೋರಿಸುವ ದಾಖಲೆಗಳ ಇರುವಿಕೆಯ ಬಗ್ಗೆ ನನಗೆ ಗೊತ್ತಿಲ್ಲ. ಕರುಡು ನಕ್ಷೆಯಲ್ಲಿ ದಾರಿ ಇದೆ ಎಂದು ವಕೀಲರು ತೋರಿಸಿರುವ ಕಾರಣ ನಾನು ದಾರಿ ಇದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸರಿ. ಸರ್ವೇ ನಂ.67/1 ಮತ್ತು 61ರ ಮಧ್ಯ ದಾರಿ ಇರುತ್ತದೆ. ಎದುರು ದಾವಾ ಸ್ವತ್ತಿನಲ್ಲಿ ಬಂಡಿ ದಾರಿ ಇರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ಎದುರು ದಾವೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ಪ್ರತಿವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.

**ಅಸಲು ದಾವಾ ನಂಃ294/2022**
**ಡಿ.ಡಬ್ಲ್ಯೂ: 02**

**ದಿನಾಂಕಃ16-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ ಜೆ ಆರ್., ವಾದಿ ಪರ ವಕೀಲರಿಂದ**

ಸದರಿ ದಾವೆಯನ್ನು ತಿಪ್ಪೇಸ್ವಾಮಿಯವರು ಬೋರಯ್ಯರವರ ಮೇಲೆ ಹೂಡಿರುತ್ತಾರೆ. ಸಾಕ್ಷಿಯು ಮುಂದುವರಿದು ಬೋರಯ್ಯರವರು ಮೊದಲು ದಾವೆ ಹೂಡಿರುತ್ತಾರೆ ಎಂದು ನುಡಿಯುತ್ತಾರೆ. ಎದುರು ದಾವೆಯನ್ನು ಸರ್ವೇ ನಂ.67/2 ರ ಸಂಬಂಧ ಹೂಡಲಾಗಿದೆ. ಸದರಿ ಜಮೀನನ್ನು ನಾನು ಖುದ್ದು ನೋಡಿರುತ್ತೇನೆ. ಎದುರು ದಾವಾ ಸ್ವತ್ತಿನ ಚೆಕ್ ಬಂದಿ ಪೂರ್ವಕ್ಕೆ ಬೋರಯ್ಯನ ತಮ್ಮನ ಜಮೀನು, ಪಶ್ಚಿಮಕ್ಕೆ ಬೂದಿ ಓಬಯ್ಯರವರ ಜಮೀನು, ಉತ್ತರಕ್ಕೆ ಮುಷ್ಟಲಗುಮ್ಮಿಯವರ ಜಮೀನು, ದಕ್ಷಿಣಕ್ಕೆ ತಿಪ್ಪೇಸ್ವಾಮಿಯವರ ಜಮೀನು ಇರುತ್ತದೆ. ಎದುರು ದಾವೆಯ ಜೊತೆಗೆ ಸಲ್ಲಿಸಿರುವ ಕರುಡು ನಕ್ಷೆಯಲ್ಲಿನ ಬಂಡಿ ದಾರಿಯನ್ನು ನಾನು ಖುದ್ದಾಗಿ ನೋಡಿರುತ್ತೇನೆ. ಬೋರಯ್ಯ ಮತ್ತು ತಿಪ್ಪೇಸ್ವಾಮಿಯವರ ಒಂದೇ ಸರ್ವೇ ನಂಬರ ಜಮೀನಿನಲ್ಲಿ ಸದರಿ ದಾರಿ ಇದ್ದು, ರೂಢಿಗತವಾಗಿ ಓಡಾಡಿಕೊಂಡು ಬಂದಿರುತ್ತಾರೆ. ದಾರಿ ಇರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ. ಸದರಿ ವಿಚಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಎದುರು ದಾವೆಯ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಸಹ ಪ್ರತಿವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂ.67/2 ರ ಪಶ್ಚಿಮಕ್ಕೆ ಸರ್ವೇ ನಂ.61 ಬರುತ್ತದೆ ಎನ್ನುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುತ್ತೇನೆ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.

**ಅಸಲು ದಾವಾ ನಂಃ294/2022**
**ಡಿ.ಡಬ್ಲ್ಯೂ: 01**

**ದಿನಾಂಕಃ16–04–2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಡಿ ಜೆ ಆರ್., ವಾದಿ ಪರ ವಕೀಲರಿಂದ**

ಎದುರು ದಾವಾ ಸ್ವತ್ತಿನ ಚೆಕ್ ಬಂದಿ ಉತ್ತರಕ್ಕೆ ಕುಂಬಾರರ ಜಮೀನು, ದಕ್ಷಿಣಕ್ಕೆ ನಮ್ಮ ಹೋಲ, ಪೂರ್ವಕ್ಕೆ ತಿಪ್ಪಯ್ಯರವರ ಹೋಲ, ಪಶ್ಚಿಮಕ್ಕೆ ಸಾಹುಕಾರರ ಹೋಲ ಇರುತ್ತದೆ. ಎದುರು ದಾವಾ ಸ್ವತ್ತಿನ ಸರ್ವೆ ನಂ.67/1. ಎದುರು ದಾವಾ ಸ್ವತ್ತಿನ ಪೂರ್ವ–ಪಶ್ಚಿಮಕ್ಕೆ ಇರುವ ಜಮೀನುಗಳ ಸರ್ವೆ ನಂಬರ ಹೇಳಲು ಆಗುವುದಿಲ್ಲ. ನಾನು ಹೇಳಿದಂತೆ ನನ್ನ ವಕೀಲರು ಎದುರು ದಾವೆಗೆ ಲಗತ್ತಾಗಿರುವ ಕರುಡು ನಕ್ಷೆಯನ್ನು ತಯಾರಿಸಿರುತ್ತಾರೆ. ಕರುಡು ನಕ್ಷೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸದರಿ ಕರುಡು ನಕ್ಷೆಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಎದುರು ದಾವಾ ಸ್ವತ್ತು ಮತ್ತು ಸಾಹುಕಾರರ ಹೋಲದ ಮಧ್ಯ ದಾರಿ ಇರುವ ಬಗ್ಗೆ ಮಾನ್ಯ ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುತ್ತೇನೆ. ಸದರಿ ಎದುರು ದಾವಾ ಸ್ವತ್ತು ಮತ್ತು ಸಾಹುಕಾರರ ಹೋಲದ ಮಧ್ಯ ಬಂಡಿ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಹುಕಾರರ ಹೋಲದ ಉತ್ತರಕ್ಕೆ ನಮಗೆ ಸೇರಿದ ಹೋಲ ಬರುತ್ತದೆ. ಸರ್ವೆ ನಂ.67/1 ರ ಪಶ್ಚಿಮಕ್ಕೆ ಸರ್ವೆ ನಂ.61 ಬರುತ್ತದೆ ಎದಂರೆ ಸಾಕ್ಷಿಯು ನನಗೆ ಸರ್ವೆ ನಂಬರಗಳು ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿಕೊಂಡು ಸುಳ್ಳು ಎದುರು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.